



ಅರುಣ ಪಿ. ಭಟ್ಟ

## ವಾರಭವಿಷ್ಯ: 29.06.2023ರಿಂದ 05.07.2023ರವರೆಗೆ




ಅರ್ಧಕ್ಕೆ ನಿಂತ ಕೆಲಸಗಳು ಮುಂದುವರೆಯುತ್ತವೆ. ನಿಮ್ಮ ಕೆಲಸಗಳು ಬಂಧುಗಳಲ್ಲಿ ಸದ್ಭಾವನೆ ಮೂಡಿಸುವುದು. ನೆಗಡಿ ಶೀತಜ್ವರದಿಂದ ಪೀಡೆ. ವಾಹನ ಸೌಖ್ಯ. ಸಣ್ಣ ಪುಟ್ಟ ವ್ಯಾಪಾರದಲ್ಲಿ ಲಾಭ. ತಾಯಿಗೆ ಅನುಕೂಲ. ನೀರಿನ ಸಮಸ್ಯೆ ಬಗೆಹರಿಯುವುದು. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗಿಯಾಗುವಿರಿ. ಶುಭದಿನ 01. ಮಾರುತಿ ಪೂಜೆ ಪ್ರಾರ್ಥನೆ ಮಾಡಿರಿ.




ವಾರದ ಪ್ರಾರಂಭದಲ್ಲೇ ವಿಶೇಷ ವಸ್ತು ಖರೀದಿ. ಪತಿ ಪತ್ನಿಯರ ಆರೋಗ್ಯ ಸ್ಥಿರವಾಗಿರುವುದು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು. ಯಂತ್ರ ಮತ್ತು ವಾಹನಗಳಲ್ಲಿ ಸಮಸ್ಯೆ ಬಂದು ಜನರಲ್ಲಿ ವೈಮನಸ್ಸು ಮೂಡಿಸುವ ಸಾಧ್ಯತೆ ಇದೆ. ಕುಟುಂಬಕ್ಕಾಗಿ ಅಧಿಕ ಖರ್ಚು. ಚಿಕ್ಕ ಪ್ರವಾಸ ಮಾಡುವ ಅವಕಾಶ ಸಿಗಲಿದೆ. ಶುಭದಿನ 03. ಗಣಪತಿ ಸುಬ್ರಮಣ್ಯ ಜಪ ಮಾಡಿರಿ.




ಹಲವು ದಿನಗಳಿಂದ ಕಾಡುತ್ತಿದ್ದ ಕೌಟುಂಬಿಕ ಸಮಸ್ಯೆಗಳು ಬಗೆಹರಿಯುವುದು. ಹೊಸ ಸೇವಕರು ಸಿಗುವರು. ಆದರೆ ಕೈಗೆ ನರದ ನೋವು ಕಾಣಿಸುವ ಸಂಭವವಿದೆ. ಬಂಧುಗಳ ವಿರೋಧ ವ್ಯಕ್ತವಾಗಬಹುದು. ವಾರಾಂತ್ಯದಲ್ಲಿ ದೂರ ಪ್ರಯಾಣದ ಸಾಧ್ಯತೆ. ವ್ಯಾಪಾರದಲ್ಲಿ ನಷ್ಟ ಸಂಭವ. ವಿನಾಕಾರಣ ಹೆದರಿಕೆ. ಸಭೆ, ವಾಗ್ಯುದ್ಧದಲ್ಲಿ ಗೆಲುವು. ಶುಭದಿನ 05. ಶನಿಸ್ತೋತ್ರ ಪಠಣ ಮಾಡಿರಿ.




ನಿಮ್ಮ ಆರೋಗ್ಯದಲ್ಲಿ ಸುಧಾರಿಸುವುದು. ಆಕಸ್ಮಿಕ ಅಧಿಕ ಖರ್ಚು ಸಂಭವ ಉಂಟು. ಆಸ್ತಿ ಖರೀದಿ ಬಗ್ಗೆ ಚಿಂತನೆ ನಡಸಲಿದ್ದೀರಿ. ಕಲಾವಿದರಿಗೆ ಸಾಹಿತಿಗಳಿಗೆ ಉತ್ತಮ ವಾರ. ರಾಜಕೀಯವಾಗಿ ಉತ್ತಮ ಅವಕಾಶಗಳು ಸಿಗಲಿದೆ. ಸಂಘ ಸಂಸ್ಥೆಗಳಿಂದ ಧನಲಾಭ. ಶತ್ರುಗಳು ಹಿಂದೆ ಸರಿಯುವರು. ಶುಭದಿನ 30. ಚಂಡಿ ಪಾರಾಯಣ ಮಾಡಿರಿ.




ಕೆಲಸ ಕಾರ್ಯದಲ್ಲಿ ನವೋಲ್ಲಾಸ ಬರುವುದು. ಧರ್ಮ ದಾನಕ್ಕಾಗಿ ಅಧಿಕ ಖರ್ಚು ಆಗಬಹುದು. ಮಿತ್ರರಿಗೆ ನಿಮ್ಮಿಂದ ಸಹಾಯ ದೊರಕಲಿದೆ. ಹಲವು ದಿನಗಳ ಜಾಡ್ಯ ಬಗೆಹರಿಯುವುದು. ಆದರೂ ಹೊಟ್ಟೆನೋವು ಕಾಡಬಹುದು. ಮನೆಯಲ್ಲಿ ಸಂಭ್ರಮದ ವಾತಾವರಣ ನಿರ್ಮಾಣವಾಗಲಿದೆ. ಶುಭದಿನ 04. ಕೆಂಪು ಹವಳ ಧಾರಣೆ ಮಾಡಿರಿ ಶಿವ ಕವಚ ಓದಿರಿ.




ಆಕಸ್ಮಿಕ ಖರ್ಚು ನಿಮ್ಮನ್ನು ವಿಚಲಿತರನ್ನಾಗಿ ಮಾಡುತ್ತದೆ. ಕಾಲಿಗೆ ನೋವು ಆಗುವ ಸಂಭವವಿದೆ. ಅಪವಾದದ ಭಯ ಕಾಡಬಹುದು. ಅಧಿಕಾರಿಗಳ ಕೆಂಗಣ್ಣು ನಿಮ್ಮ ಮೇಲೆ ಬೀಳಬಹುದು. ವ್ಯಾಪಾರದಲ್ಲಿ ಅಧಿಕ ಲಾಭ ಹಳೆಯ ಮಿತ್ರರ ಆಗಮನ. ಮಕ್ಕಳಿಂದ ಶುಭವಾರ್ತೆ. ಮಹತ್ವದ ಕಾಗದ ಪತ್ರಗಳ ರಕ್ಷಣೆ ಮಾಡಲಿದ್ದೀರಿ. ಸಹೋದರರ ಸಹಾಯ. ಶುಭದಿನ 01. ಮಾರುತಿ ಉಪಾಸನೆ ಪೂಜೆ ಮಾಡಿರಿ.




ವೃತ್ತಿ ವ್ಯವಹಾರದಲ್ಲಿ ಅಧಿಕ ಲಾಭ ಸಿಗಲಿದೆ. ವ್ಯಾವಹಾರಿಕ ಅನುಕೂಲಗಳು ಹೆಚ್ಚಾಗಲಿದೆ. ಸರ್ಕಾರಿ ಕೆಲಸಗಳು ಶೀಘ್ರದಲ್ಲಿ ಆಗುವುದು. ತಂದೆ ತಾಯಿಯವರ ಆರೋಗ್ಯ ಸುಧಾರಣೆ, ಮಾನ, ಮನ್ನಣೆ ದೊರೆಯುವುದು. ದೂರ ಪ್ರವಾಸ ಕೈಗೊಳ್ಳುವ ಸಂಭವವಿದೆ. ಕಲಾವಿದರಿಗೆ ಸಂಗೀತಗಾರರಿಗೆ ಒಳ್ಳೆಯ ವಾರ. ಶುಭದಿನ 02. ಚಾಮುಂಡಿ ಸ್ತುತಿ ವನದುರ್ಗಾ ಜಪ ಮಾಡಿರಿ.




ನಿರೀಕ್ಷಿತ ಅಧಿಕಾರ ಲಾಭ ಆಗಲಿದೆ. ಅಧಿಕಾರಿಗಳಿಗೆ ಪದೋನ್ನತಿ ಸಿಗುವ ಸಾಧ್ಯತೆ ಹೆಚ್ಚಿದೆ. ನಿಮಗೆ ಬರಬೇಕಾದ ಬಾಕಿ ಹಣ ಬರುತ್ತದೆ. ಹೆಂಡತಿ ಪ್ರವಾಸ ಕೈಗೊಳ್ಳುವ ಯೋಗವಿದೆ. ಈವಾರ ಆರೋಗ್ಯವಾಗಿರುವಿರಿ. ಕೌಟುಂಬಿಕವಾಗಿ ಅಧಿಕ ಖರ್ಚು ಸಂಭವ. ಕಣ್ಣಿನ ಸಮಸ್ಯೆ ಉಂಟಾಗಬಹುದು. ಶುಭದಿನ 04. ಗುರು ರಾಘವೇಂದ್ರ ಸ್ವಾಮಿ ಭಜನೆ ಮಾಡಿರಿ.




ಮಕ್ಕಳ ವಿದೇಶ ಪ್ರವಾಸಕ್ಕೆ ಸಿದ್ಧತೆ ಮಾಡಿಕೊಳ್ಳಲಿದ್ದಾರೆ. ಅಕಸ್ಮಾತ್ ಬೆಲೆಬಾಳುವ ವಸ್ತು ಸಿಗಲಿದೆ. ಕಣ್ಣು, ಕಿವಿ, ನೋವು ಕಾಡಬಹುದು. ಮನೆಯ ಹೊರಗಡೆ ವಾಸ ಈ ವಾರ ಅನಿವಾರ್ಯವಾಗಬಹುದು. ನದಿಯ ಪಾತ್ರದಲ್ಲಿ ಪ್ರವಾಸ ಮಾಡುವಾಗ ಎಚ್ಚರವಹಿಸಿ. ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶವಿದೆ. ಉತ್ತಮ ಭಾಷಣ ಮಾಡುವಿರಿ. ಶುಭದಿನ 02. ಆದಿತ್ಯ ಹೃದಯ ಪಠಿಸಿರಿ.




ತಾಯಿಗೆ ಅಕಸ್ಮಾತ್ ಬೇನೆ ಕಾಡಬಹುದು. ಜಮೀನಿನ ಕೆಲಸಗಾರರು ಕೈಕೊಡುವರು. ವಾಹನ ಅಪಘಾತದ ಭಯ ಸ್ವಲ್ಪ ಬಾಧಿಸುತ್ತದೆ. ಮಿತ್ರರಿಂದಲೂ ಅಪವಾದ ಎದುರಿಸುವ ಸಾಧ್ಯತೆ. ಸ್ಪರ್ಧಾತ್ಮಕ ವಿಷಯದಲ್ಲಿ ಅಚಾನಕ್ ಯಶಸ್ಸು ಸಿಗಬಹುದು. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ. ಸ್ಟೇಶನರಿ ಖರೀದಿಯಲ್ಲಿ ಲಾಭ. ನೆಂಟರ ಆಗಮನ. ಶುಭದಿನ 04. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಅಧಿಕಾರಿಗಳಿಗೆ ಪೂರ್ವದಿಕ್ಕಿಗೆ ವರ್ಗಾವಣೆ ಆಗುವ ಸಾಧ್ಯತೆ. ಮಹಿಳೆಯರಿಗೆ ಅನಾರೋಗ್ಯ ಉಂಟಾಗಬಹುದು ಎಚ್ಚರವಹಿಸಿ. ಮನೆ ಬದಲಾವಣೆ ಪ್ರಕ್ರಿಯೆಗೆ ತಡೆ ಹಾಕಲಿದ್ದೀರಿ. ವಾರಾಂತ್ಯದಲ್ಲಿ ಧನಲಾಭ ಪ್ರಾಪ್ತಿ. ಮನೆಗೆಲಸದವರು ಬರುತ್ತಾರೆ. ಸ್ಪರ್ಧೆಗಳಲ್ಲಿ ಅಪಯಶ. ಕೆಂಪುಬಣ್ಣದ ಯಂತ್ರಗಳ ಖರೀದಿಗೆ ಸುಸಮಯ. ಶುಭದಿನ 05. ವಿಷ್ಣು ಸಹಸ್ರನಾಮ ಪಠಿಸಿರಿ.




ಕುಟುಂಬದಲ್ಲಿಯೇ ಸದಸ್ಯರ ವಿರೋಧವನ್ನು ಎದುರಿಸಬೇಕಾಗುತ್ತದೆ. ಪ್ರಯತ್ನ ಪೂರ್ವಕ ಬರತಕ್ಕ ಬಾಕಿ ಹಣವನ್ನು ವಸೂಲಿಯನ್ನು ಮಾಡಲಿದ್ದೀರಿ. ಮಕ್ಕಳು ಹೆಸರುಗಳಿಸುವುದಕ್ಕೆ ವೇದಿಕೆ ಮಾಡಿಕೊಡಲಿದ್ದೀರಿ. ಷೇರು ವ್ಯವಹಾರಗಳಲ್ಲಿ ಅಧಿಕ ಲಾಭ. ಹೃದಯ ಸಂಬಂಧಿ ಕಾಯಿಲೆ ಇರುವವರು ಎಚ್ಚರಿಕೆಯಿಂದಿರಿ. ಚಿಕ್ಕ ಪ್ರವಾಸ ಕೈಗೊಳ್ಳಲಿದ್ದೀರಿ. ಶುಭದಿನ 03. ಹನುಮಾನ್ ಚಾಲೀಸ್ ಪಠಿಸಿರಿ.